ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೧೦**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಮೂವತ್ತೆರಡನೆಯ ಅಧಿವೇಶನ**

**ಶುಕ್ರವಾರ, ದಿನಾಂಕ: ೦೨ನೇ ಡಿಸೆಂಬರ್, ೨೦೧೬**

---

**ಸಮೂಹ – V**

೧. ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತಸೌಲಭ್ಯ ಅಭಿವೃದ್ಧಿ ಸಚಿವರು.
೨. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.
೩. ಉನ್ನತ ಶಿಕ್ಷಣ ಸಚಿವರು.
೪. ವಸತಿ ಸಚಿವರು.
೫. ಸಣ್ಣ ಕೈಗಾರಿಕೆ ಸಚಿವರು.
೬. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು.
೭. ಸಾರಿಗೆ ಸಚಿವರು.
೮. ಗಣಿ ಮತ್ತು ಭೂವಿಜ್ಞಾನ ಸಚಿವರು.

---

## ಬಾಪೂಜಿ ಸೇವಾ ಕೇಂದ್ರದಲ್ಲಿನ ಸೇವಾ ನ್ಯೂನ್ಯತೆ ಮತ್ತು ಮೂಲಸೌಕರ್ಯ ಕೊರತೆ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೩೬ (೧೧೦೮) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ''ಪಂಚಾಯತಿ–೧೦೦ ಬಾಪೂಜಿ ಸೇವಾ ಕೇಂದ್ರ''ದ ಮೂಲಕ ಯಾವ–ಯಾವ ಇಲಾಖೆಯ ಯಾವ ಸೇವೆಗಳನ್ನು ನೀಡಲಾಗುತ್ತಿದೆ ; (ವಿವರ ಒದಗಿಸುವುದು)

(ಆ) ರಾಜ್ಯದಲ್ಲಿ ಒಟ್ಟು ಎಷ್ಟು ಬಾಪೂಜಿ ಸೇವಾ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ; ಬಾಪೂಜಿ ಸೇವಾ ಕೇಂದ್ರಗಳಿಗೆ ಒದಗಿಸಲಾದ ಪೀಠೋಪಕರಣ, ಕಂಪ್ಯೂಟರ್, ಪ್ರಿಂಟರ್ ಹಾಗೂ ಮಾನವ ಸಂಪನ್ಮೂಲಗಳಾವುವು ; ಅನುದಾನ ಎಷ್ಟು ;

(ಇ) ಬಾಪೂಜಿ ಸೇವಾ ಕೇಂದ್ರದ ಮೂಲಕ ಇಲ್ಲಿಯವರೆಗೆ ಸ್ವೀಕೃತವಾದ ಅರ್ಜಿಗಳೆಷ್ಟು; ನೀಡಿದ ಸೌಲಭ್ಯಗಳೆಷ್ಟು ; (ಸೇವಾವಾರು–ಜಿಲ್ಲೆ–ತಾಲ್ಲೂಕುವಾರು ವಿವರ ನೀಡುವುದು)

(ಈ) ಬಾಪೂಜಿ ಸೇವಾ ಕೇಂದ್ರದ ಕಂಪ್ಯೂಟರ್, ಪೀಠೋಪಕರಣ ಸೇರಿದಂತೆ ಮೂಲ ಸೌಕರ್ಯದ ಕೊರತೆ, ಸಿಬ್ಬಂದಿ ಕೊರತೆ, ಸರ್ವರ್ ಸಮಸ್ಯೆಗಳು ಸೇರಿದಂತೆ ಅನ್ಯ ಇಲಾಖೆಯ ಎಲ್ಲಾ ೧೦೦ ಸೇವೆಗಳು ಲಭ್ಯತೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಬಾಪೂಜಿ ಸೇವಾ ಕೇಂದ್ರದ ಮೂಲಕ ವಿದ್ಯುತ್ ಬಿಲ್ಲು, ದೂರವಾಣಿ ಬಿಲ್ಲು ಸೇರಿದಂತೆ ಸೇವೆಗಳ ವಿಸ್ತರಣೆ, ಸಿಬ್ಬಂದಿ ಮಂಜೂರಾತಿ, ಕಂಪ್ಯೂಟರ್ – ಪೀಠೋಪಕರಣ ಖರೀದಿಗೆ ಅನುದಾನ, ಸರ್ವರ್ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ; ಯಾವ ಕಾಲಮಿತಿಯಲ್ಲಿ ಅನುದಾನ ಒದಗಿಸಲಾಗುವುದು ? (ಸಂಪೂರ್ಣ ವಿವರ ನೀಡುವುದು)

**ಸರ್ಕಾರಿ ಶಾಲೆ ಹಾಗೂ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳ ಬಗ್ಗೆ**

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) –**

೧೩೭ (೧೨೫೪) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸರ್ಕಾರಿ ಶಾಲೆ ಹಾಗೂ ಕಾಲೇಜುಗಳಿಗೆ ಸರ್ಕಾರದಿಂದ ಒದಗಿಸಿದ ಮೂಲಭೂತ ಸೌಕರ್ಯಗಳೇನು ; ಹಾಗೂ ಶಿಕ್ಷಕರಿಗೆ ನೀಡುತ್ತಿರುವ ವೇತನ ಮತ್ತು ಇತರೆ ಸೌಲಭ್ಯಗಳೇನು ; (ಸಂಪೂರ್ಣ ಪ್ರತ್ಯೇಕ ಮಾಹಿತಿ ನೀಡುವುದು)

(ಆ) ಖಾಸಗಿ ಅನುದಾನಿತ ಶಾಲೆ ಹಾಗೂ ಕಾಲೇಜುಗಳಿಗೆ ಸರ್ಕಾರದಿಂದ ಒದಗಿಸುವ ಮೂಲಭೂತ ಸೌಲಭ್ಯಗಳೇನು ; ಹಾಗೂ ಶಿಕ್ಷಕರಿಗೆ ನೀಡುತ್ತಿರುವ ವೇತನ ಮತ್ತು ಇತರೆ ಸೌಲಭ್ಯಗಳೇನು ; (ಸಂಪೂರ್ಣ ಪ್ರತ್ಯೇಕ ಮಾಹಿತಿ ನೀಡುವುದು)

(ಇ) ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಶಾಲೆ ಹಾಗೂ ಕಾಲೇಜುಗಳಿಗೆ ಸರ್ಕಾರದಿಂದ ತಾರತಮ್ಯ ಹಾಗೂ ದ್ವಿಮುಖ ನೀತಿ ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕಿದೆಯೇ ; ಇದ್ದಲ್ಲಿ, ಸಂಪೂರ್ಣ ಮಾಹಿತಿ ನೀಡುವುದು;

(ಈ) ಇದನ್ನು ಸರಿಪಡಿಸಲು ಸರ್ಕಾರ ಮುಂದಾಗುವುದೇ ; ಇದ್ದಲ್ಲಿ, ಸರ್ಕಾರದ ಮುಂದಿರುವ ಕ್ರಮಗಳೇನು ?

## ಗ್ರಾಮ ಪಂಚಾಯತಿಗಳಲ್ಲಿ ಉಳಿದಿರುವ ಬಾಕಿ ವಿದ್ಯುತ್ ಬಿಲ್ಲುಗಳ ಕುರಿತು

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) –**

೧೩೮ (೧೧೧೬) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಗ್ರಾಮ ಪಂಚಾಯತಿಗಳಲ್ಲಿ ಉಳಿದಿರುವ ವಿದ್ಯುತ್ ಬಿಲ್ ಬಾಕಿ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಬಾಕಿ ಮನ್ನಾ ಯೋಜನೆ ಮೂಲಕ ಮನ್ನಾ ಮಾಡಲು ಸಾಧ್ಯವೇ ;

(ಇ) ಈಗಾಗಲೇ ನಷ್ಟದಲ್ಲಿರುವ ಎಸ್ಕಾಂಗಳಿಗೆ ಬಾಕಿ ಮನ್ನಾ ಯೋಜನೆ ಮೂಲಕ ಮನ್ನಾ ಮಾಡಿದರೆ ತೊಂದರೆ ಆಗುವುದಿಲ್ಲವೇ ;

(ಈ) ಕಳೆದ ಹಲವು ವರ್ಷಗಳಿಂದ ಗ್ರಾಮ ಪಂಚಾಯತಿಗಳಲ್ಲಿ ವಿದ್ಯುತ್ ಬಿಲ್ ಬಾಕಿ ಹಾಗೆಯೇ ಉಳಿಯಲು ಕಾರಣವೇನು ;

(ಉ) ಭಾರಿ ಮೊತ್ತದ ಬಿಲ್ಲು ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಊ) ಸರ್ಕಾರ ತೆಗೆದುಕೊಂಡ ಕ್ರಮವೇನು ?

## ಜೆ.ಓ.ಸಿ. ಶಿಕ್ಷಕರನ್ನು ವಿಲೀನಗೊಳಿಸುವ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) –**

೧೩೯ (೧೨೪೨) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ವೃತ್ತಿ ಶಿಕ್ಷಣ ಅಧಿನಿಯಮ, ೨೦೧೧ರ ಪ್ರಕಾರ ೫ ವರ್ಷ ಪೂರೈಸಿ ಉಳಿದ ಸಿಬ್ಬಂದಿಗಳ ಸಂಖ್ಯೆ ಎಷ್ಟು ; ಇವರನ್ನು ಇಲಾಖೆಯಲ್ಲಿ ವಿಲೀನಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ಸದರಿ ಅಧಿನಿಯಮದಡಿ ವೃತ್ತಿ ಶಿಕ್ಷಣ ಇಲಾಖೆಯಿಂದ ಬೇರೆ ಇಲಾಖೆಗಳಿಗೆ ವಿಲೀನಗೊಂಡ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಸಿಬ್ಬಂದಿಗಳ ಒಟ್ಟು ಸಂಖ್ಯೆ ಎಷ್ಟು ; (ವಿಲೀನಗೊಂಡ ಇಲಾಖಾವಾರು ಮಾಹಿತಿ ನೀಡುವುದು)

(ಇ) ವೃತ್ತಿ ಶಿಕ್ಷಣ ಇಲಾಖೆಯಿಂದ ಬೇರೆ ಇಲಾಖೆಗಳಿಗೆ ವಿಲೀನಗೊಂಡು, ತೊಂದರೆಗಳಿಗೆ ಒಳಗಾದ ಸಿಬ್ಬಂದಿಗಳು ಇರುವರೇ ; ಇದ್ದರೆ ಒಟ್ಟು ಇಲಾಖಾವಾರು ಸಿಬ್ಬಂದಿಗಳು ಎಷ್ಟು ; ಅವರ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ; (ವಿವರವಾದ ಮಾಹಿತಿ ನೀಡುವುದು)

(ಈ) ವೃತ್ತಿ ಶಿಕ್ಷಣ ಇಲಾಖೆ ನೌಕರರುಗಳ ಬೇಡಿಕೆಯ ಬಗ್ಗೆ ಸಂಬಂಧಿಸಿದಂತೆ ಸರ್ಕಾರದಿಂದ ಶಾಸಕರನ್ನು ಒಳಗೊಂಡಂತೆ ಸಮಿತಿಯನ್ನು ನೇಮಕ ಮಾಡಲಾಗಿದೆಯೇ ; ಸದರಿ ಸಮಿತಿಯ ಶಿಫಾರಸ್ಸಿನ ಅನ್ವಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸರ್ಕಾರದ ನಿಲುವೇನು ?

## ರಾಯಚೂರು ಜಿಲ್ಲೆಯಲ್ಲಿ ಬೃಹತ್ ಕೈಗಾರಿಕೆ ಸ್ಥಾಪನೆ ಹಾಗೂ ಕೈಗಾರಿಕೆ ನಿರ್ಮಾಣ ಮಾಡಲು ಭೂಮಿ ಸಂಗ್ರಹಿಸುವ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೧೪೦ (೧೧೭೫) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಹಿಂದುಳಿದ ಜಿಲ್ಲೆಯಾದ ರಾಯಚೂರಿನಲ್ಲಿ ಬೃಹತ್ ಕೈಗಾರಿಕೆ ಸ್ಥಾಪನೆ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ರಾಯಚೂರಿನಲ್ಲಿ ಕೈಗಾರಿಕೆ ನಿರ್ಮಾಣ ಮಾಡಲು ನಿವೇಶನ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕೈಗಾರಿಕೆ ನಿರ್ಮಾಣಕ್ಕೆ ಭೂಮಿ ಸಂಗ್ರಹ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ಮಾನ್ವಿ ಪಟ್ಟಣದಲ್ಲಿ ಕೈಗಾರಿಕೆ ನಿರ್ಮಾಣ ಮಾಡಲು ನಿವೇಶನ ಕೊರತೆ (ಜಾಗ ಲಭ್ಯತೆ ಇಲ್ಲದ ಕೊರತೆ) ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕೈಗಾರಿಕೆ ನಿರ್ಮಾಣಕ್ಕೆ ಭೂಮಿ ಸಂಗ್ರಹ ಮಾಡಲು ಸರ್ಕಾರ ತಗೆದುಕೊಂಡ ಕ್ರಮಗಳೇನು ;

(ಈ) ರಾಯಚೂರು ಜಿಲ್ಲೆಯಲ್ಲಿ ೨೦೧೩ ರಿಂದ ಇಲ್ಲಿಯವರೆಗೂ ಕೈಗಾರಿಕೆ ಕೇಂದ್ರಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಹೆಚ್ಚಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; ಅದಕ್ಕೆ ಖರ್ಚು ಮಾಡಿದ ವೆಚ್ಚ ಎಷ್ಟು ;

(ಉ) ರಾಯಚೂರಿನಲ್ಲಿ ಲ್ಯಾಂಡ್‌ಬ್ಯಾಂಕ್ ಪ್ರಾರಂಭ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?

## ಶಿವಮೊಗ್ಗ ಜಿಲ್ಲೆಯಲ್ಲಿ ಗ್ರಾಮ ಪಂಚಾಯತಿ ಅಧಿಕಾರಿಗಳ (ಪಿಡಿಓ) ಕಾರ್ಯನಿರ್ವಹಣೆ

**ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೪೧ (೧೦೮೭) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಶಿವಮೊಗ್ಗ ಜಿಲ್ಲೆಯಲ್ಲಿರುವ ಗ್ರಾಮ ಪಂಚಾಯತಿಗಳು ಮತ್ತು ದಾವಣಗೆರೆ ಜಿಲ್ಲೆಯ ಹೊನ್ನಾಳಿ ಮತ್ತು ಚನ್ನಗಿರಿ ತಾಲ್ಲೂಕುಗಳಲ್ಲಿರುವ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು (ಪಿಡಿಓ) ಇದ್ದಾರೆಯೇ; ಇಲ್ಲದಿದ್ದಲ್ಲಿ, ಎಷ್ಟು ಗ್ರಾಮ ಪಂಚಾಯತಿಗಳಲ್ಲಿ ಇರುವುದಿಲ್ಲ;

(ಆ) ಶಿವಮೊಗ್ಗ ಜಿಲ್ಲೆಯಲ್ಲಿರುವ ಗ್ರಾಮ ಪಂಚಾಯತಿಗಳು ಮತ್ತು ದಾವಣಗೆರೆ ಜಿಲ್ಲೆಯ ಹೊನ್ನಾಳಿ ಮತ್ತು ಚನ್ನಗಿರಿ ತಾಲ್ಲೂಕುಗಳಲ್ಲಿರುವ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಗ್ರೇಡ್–೧ ಕಾರ್ಯದರ್ಶಿಗಳು ಇದ್ದಾರೆಯೇ ; ಇಲ್ಲದಿದ್ದಲ್ಲಿ, ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಇ) ಶಿವಮೊಗ್ಗ ಜಿಲ್ಲೆಯಲ್ಲಿರುವ ಎಲ್ಲಾ ಗ್ರಾಮ ಪಂಚಾಯತಿ ಕಛೇರಿಯಿಂದ ನಡೆಯುವ ಕಾಮಗಾರಿಗಳ ಅಂದಾಜು ಪಟ್ಟಿ, ಕಾಮಗಾರಿ ಪರಿಶೀಲನೆ, ನಿರ್ವಹಣೆ ಮತ್ತು ಬಿಲ್ಲುಗಳನ್ನು ತಯಾರಿಸಲು ಅಗತ್ಯವಿರುವಷ್ಟು ಸಹಾಯಕ ಅಭಿಯಂತರರು ಕಾರ್ಯನಿರ್ವಹಿಸುತ್ತಿದ್ದಾರೆಯೇ ;

(ಈ) ಶಿವಮೊಗ್ಗ ಜಿಲ್ಲೆಯ ಎಲ್ಲಾ ತಾಲ್ಲೂಕು ಮತ್ತು ಹೊನ್ನಾಳಿ ಮತ್ತು ಚನ್ನಗಿರಿ ತಾಲ್ಲೂಕುಗಳಲ್ಲಿ ಕಾರ್ಯನಿರ್ವಹಣಾ ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆಯೇ ; ಇಲ್ಲದಿದ್ದಲ್ಲಿ ಕಾರ್ಯನಿರ್ವಹಣಾಧಿಕಾರಿಗಳನ್ನು ತುಂಬಲು ಸರ್ಕಾರ ಕ್ರಮ ಕೈಗೊಂಡಿದೆಯೇ ;

(ಉ) ತಾಲ್ಲೂಕು ಪಂಚಾಯತಿ ಕಾರ್ಯನಿರ್ವಹಣ ಅಧಿಕಾರಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರೇ ಅಥವಾ ಬೇರೆ ಇಲಾಖೆಯಿಂದ ಎರವಲು ಪಡೆಯಲಾಗಿದೆಯೇ ? (ವಿವರ ನೀಡುವುದು)

## ಕರ್ನಾಟಕ ರಾಜ್ಯ ಪ್ರೌಢಶಾಲಾ ಮತ್ತು ಪದವಿಪೂರ್ವ ಬೋಧಕ ಸಿಬ್ಬಂದಿಗೆ "ವಿಶೇಷ ಬಡ್ತಿ" ನೀಡುವ ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) –**

೧೪೨ (೧೦೮೧) ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕರ್ನಾಟಕ ರಾಜ್ಯದ ಪ್ರೌಢ ಶಾಲಾ ಸಹ ಶಿಕ್ಷಕರು, ಮುಖ್ಯ ಶಿಕ್ಷಕರು ಹಾಗೂ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರು ಮತ್ತು ಪ್ರಾಂಶುಪಾಲರಿಗೆ ಒಂದು "ವಿಶೇಷ ಬಡ್ತಿ" ಯನ್ನು ಯಾವಾಗ ಮಂಜೂರು ಮಾಡಲಾಯಿತು;

(ಆ) ಮಂಜೂರಾದ ಆದೇಶ ಜಾರಿಗೆ ಬಂದಿದೆಯೇ ;

(ಇ) ಇನ್ನು ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರಿಗೆ ಜಾರಿಯಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಮುಖ್ಯ ಶಿಕ್ಷಕರ ತತ್ಸಮಾನ ಹುದ್ದೆಗಳಿಗೆ ಪ್ರೌಢ ಶಾಲೆಯ ಹಿಂದಿ, ದೈಹಿಕ, ಕ್ರಾಫ್ಟ್ ಇತರೆ ಶಿಕ್ಷಕರುಗಳಿಗೆ ಮಂಜೂರು ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಬಂದಿದ್ದಲ್ಲಿ, ಎಷ್ಟು ದಿನಗಳಲ್ಲಿ ಜಾರಿ ಮಾಡಲಾಗುವುದು ?

## ರಾಜ್ಯದಲ್ಲಿ ಇಲ್ಲಿಯವರೆಗೆ ಅಳವಡಿಸಿರುವ ಶುದ್ಧ ಕುಡಿಯುವ ನೀರಿನ ಘಟಕದ ಬಗ್ಗೆ

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೪೩ (೧೧೦೦) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಇಲ್ಲಿಯವರೆಗೆ ಅಳವಡಿಸಲಾಗಿರುವ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಕೇಂದ್ರ ಅಥವಾ ರಾಜ್ಯದ ಯಾವ ಯೋಜನೆ ಅಡಿ ಅಳವಡಿಸಲಾಗಿದೆ ; ಇದರಲ್ಲಿ ಕೇಂದ್ರ ಪಾಲುಗಾರಿಕೆ ಹಾಗೂ ರಾಜ್ಯದ ಪಾಲುಗಾರಿಕೆ ಎಷ್ಟು ;

(ಆ) ರಾಜ್ಯದಲ್ಲಿ ಇಲ್ಲಿಯವರೆಗೆ ಎಷ್ಟು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಲಾಗಿದೆ ; ಇಲ್ಲಿಯವರೆಗೆ ಎಷ್ಟು ಘಟಕಗಳು ಕಾರ್ಯಾರಂಭ ಗೊಂಡಿವೆ ; ಯಾವ ಯಾವ ಕಂಪನಿಗಳಿಂದ ಖರೀದಿಸಲಾಗಿದೆ ; (ಸಂಪೂರ್ಣ ವಿವರ ನೀಡುವುದು)

(ಇ) ಶುದ್ಧ ಕುಡಿಯುವ ನೀರಿನ ಘಟಕಗಳ ಖರೀದಿ ಕುರಿತು ಯಾವ ದಿನಾಂಕದಂದು ಟೆಂಡರ್ ಕರೆಯಲಾಗಿತ್ತು ; ಟೆಂಡರ್ ಪ್ರಕ್ರಿಯೆಯಲ್ಲಿ ಪಾಲ್ಗೊಂಡ ಕಂಪನಿಗಳ ಸಂಪೂರ್ಣ ವಿವರ ನೀಡುವುದು ;

(ಈ) ಸದರಿ ಶುದ್ಧ ಕುಡಿಯುವ ನೀರಿನ ಘಟಕವು ಒಂದು ದಿನಕ್ಕೆ ಇರುವ ನೀರು ಶುದ್ಧೀಕರಣದ ಸಾಮರ್ಥ್ಯವೆಷ್ಟು ; ಹಾಗೂ ಒಂದು ಘಟಕದ ಖರೀದಿ ಮೊತ್ತವೆಷ್ಟು;

(ಉ) ಶುದ್ಧ ಕುಡಿಯುವ ನೀರಿನ ಘಟಕ ಖರೀದಿಯನ್ನು ಯಾವ ಯಾವ ಸಂಸ್ಥೆಯಿಂದ ಖರೀದಿಸಲಾಗಿದೆ ? (ಖರ್ಚು/ವೆಚ್ಚಗಳ ಸಂಪೂರ್ಣ ವಿವರಗಳನ್ನು ನೀಡುವುದು)

## ಮೇಲ್ವಿಚಾರಕರ ಹುದ್ದೆಗೆ ಮುಂಬಡ್ತಿ ನೀಡುವಾಗ ನಿಯಮಾವಳಿ ಪಾಲನೆ ಆಗದಿರುವ ಬಗ್ಗೆ

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ) –**

೧೪೪ (೧೯೬೮) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮುದ್ರಣ, ಲೇಖನ ಸಾಮಗ್ರಿ ಹಾಗೂ ಪ್ರಕಟಣೆಗಳ ಇಲಾಖೆಯಲ್ಲಿ, ಮೇಲ್ವಿಚಾರಕರ ಹುದ್ದೆಗೆ ಮುಂಬಡ್ತಿ ನೀಡುವಾಗ ಕೆಲವು ವರ್ಗಕ್ಕೆ ನಿಗದಿತ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಮುಂಬಡ್ತಿ ನೀಡಿ, ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಅನ್ಯಾಯವಾಗಿದ್ದು ರೋಸ್ಟರ್ ಬಿಂದುಗಳು ಅದಲು ಬದಲು ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಸರ್ಕಾರ ತೆಗದುಕೊಳ್ಳುವ ಕ್ರಮವೇನು ; ಅಲ್ಲದೆ ಫೀಡರ್ ಕೇಡರ್‌ನ ವ್ಯಾಪ್ತಿಗೆ ಒಳಪಡದ ಅನರ್ಹರಿಗೆ ೨೦೦೬ರಲ್ಲಿಯೇ ಮುಂಬಡ್ತಿ ನೀಡಿ ತದನಂತರ ೨೦೧೬ರಲ್ಲಿ ಈ ಮುಂಬಡ್ತಿಯನ್ನು ವಾಪಸ್ಸು ಪಡೆದುಕೊಂಡು, ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಅನ್ಯಾಯ ಉಂಟು ಮಾಡಿ, ೬ ವರ್ಷಗಳ ಕಾಲ ಈ ರೋಸ್ಟರ್ ಬಿಂದುವನ್ನು ಬ್ಲಾಕ್ ಮಾಡಿರುವ ಬಗ್ಗೆ ಮಾಹಿತಿ ನೀಡುವುದು;

(ಇ) ಸೇವಾ ಜೇಷ್ಠತೆಯಲ್ಲಿ ಹಿರಿಯರಾದವರನ್ನು ಕಡೆಗಣಿಸಿ, ಕಿರಿಯರಾದವರಿಗೆ ಮುಂಬಡ್ತಿ ನೀಡಿ, ರೋಸ್ಟರ್ ಬಿಂದುಗಳನ್ನು ಅದಲು ಬದಲು ಹಾಗೂ ಮುಂಬಡ್ತಿ ನೀಡಿ ರೊಸ್ಟರ್ ವಹಿಯಲ್ಲಿ ನಮೂದಿಸದೆ ಕೇಡರ್ ಸ್ಟ್ರೆಂತ್‌ನಲ್ಲಿ ದೋಷಪೂರಿತ ಲೆಕ್ಕಾಚಾರ ಮಾಡಿರುವುದಕ್ಕೆ ಕಾರಣವೇನು ?

## ಗ್ರಾಮೀಣ ನೀರು ಸರಬರಾಜು ಕುಡಿಯುವ ನೀರಿನ ಬಗ್ಗೆ

**ಶ್ರೀಮತಿ ಜಯಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೧೪೫ (೧೧೬೩) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ೨೦೧೫–೧೬ನೇ ಸಾಲಿನಲ್ಲಿ ಗ್ರಾಮೀಣ ಕುಡಿಯುವ ನೀರಿನ ಯೋಜನೆಯಡಿ ಚಿತ್ರದುರ್ಗ ಜಿಲ್ಲೆಯಾದ್ಯಂತ ಎಷ್ಟು ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿದೆ ;

(ಆ) ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಲಾಗಿರುವ ಗ್ರಾಮಗಳ ಸಂಖ್ಯೆ ಎಷ್ಟು ;

(ಇ) ಬಾಕಿ ಉಳಿದಿರುವ ಗ್ರಾಮಗಳ ಸಂಖ್ಯೆ ಎಷ್ಟು ; (ಚಿತ್ರದುರ್ಗ ಜಿಲ್ಲೆ ಮಾತ್ರ)

(ಈ) ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ವಹಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಪದವಿ ಕಾಲೇಜುಗಳಲ್ಲಿನ ಉಪನ್ಯಾಸಕರು ಹಾಗೂ ಪ್ರಾಧ್ಯಾಪಕರುಗಳಿಗೆ ಸರ್ಕಾರದಿಂದ ಪ್ರಶಸ್ತಿ ನೀಡುವ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೧೪೬ (೧೨೦೬) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಪದವಿ ಕಾಲೇಜುಗಳಲ್ಲಿ ಉಪನ್ಯಾಸ ನೀಡುವ ಪ್ರಾಧ್ಯಾಪಕರು ಹಾಗೂ ಉಪನ್ಯಾಸಕರುಗಳ ಉತ್ತಮ ಸೇವೆಗಾಗಿ ಸರ್ಕಾರದಿಂದ ಯಾವುದಾದರೂ ಪ್ರಶಸ್ತಿಗಳನ್ನು ನೀಡಲಾಗುತ್ತಿದೆಯೇ ;

(ಆ) ಇಲ್ಲವಾದಲ್ಲಿ, ಈ ಸಂಬಂಧ ಸರ್ಕಾರದ ನಿಲುವೇನು ?

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿನ ಅಕ್ರಮಗಳು

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೪೭ (೧೨೫೨) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಇರುವ ವಿವಿಧ ಯೋಜನೆಗಳಾವುವು ;

(ಆ) ಈ ಯೋಜನೆಗಳಲ್ಲಿ ಎಷ್ಟು ಯೋಜನೆಗಳು ನೇರವಾಗಿ ಗ್ರಾಮೀಣ ಜನರ ಬದುಕಿಗೆ ಸಹಾಯಕಾರಿಯಾಗಿವೆ ; (ವಿವರ ನೀಡುವುದು)

(ಇ) ಕಳೆದ ೩ ವರ್ಷಗಳಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಗೊಂಡ ಬೃಹತ್ ಯೋಜನೆಗಳಾವುವು ; (ವಿವರ ನೀಡುವುದು)

(ಈ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕಳೆದ ೩ ವರ್ಷಗಳಲ್ಲಿ ಬೆಳಕಿಗೆ ಬಂದ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರಗಳ ಪ್ರಕರಣಗಳೆಷ್ಟು ; ಇದಕ್ಕೆ ಹೊಣೆಯಾಗಿರುವ ತಪ್ಪಿತಸ್ಥ ಅಧಿಕಾರಿಗಳು ಯಾರು; (ಹೆಸರು, ವಿಳಾಸದೊಂದಿಗೆ ವಿವರ ನೀಡುವುದು)

(ಉ) ತಪ್ಪಿತಸ್ಥರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮವೇನು ?

## ರಾಮನಗರ ಪಟ್ಟಣದಲ್ಲಿ ಜವಳಿ ಪಾರ್ಕ್ ನಿರ್ಮಾಣದ ಬಗ್ಗೆ

**ಶ್ರೀ ಸೈಯದ್ ಮುಧೀರ್ ಆಗಾ (ವಿಧಾನಸಭೆಯಿಂದ ಚುನಾಯಿತರಾದವರು) –**

೧೪೮ (೧೧೩೬) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಮನಗರ ಪಟ್ಟಣದಲ್ಲಿ ಅಪೆರೆಲ್ ಪಾರ್ಕ್ ನಿರ್ಮಿಸಲು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳ ಸಹಯೋಗದೊಂದಿಗೆ TCID ಯೋಜನೆಯಡಿ ರೂ. ೨೭೯೦.೦೦ ಲಕ್ಷಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುವುದು, ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಈ ಪ್ರಸ್ತಾವನೆಯು ಪ್ರಸ್ತುತ ಯಾವ ಹಂತದಲ್ಲಿದೆ ; ಅಪೆರಲ್ ಪಾರ್ಕ್ ನಿರ್ಮಿಸಲು ಅಗತ್ಯ ಭೂಮಿಯು ಲಭ್ಯವಿರುವುದು ನಿಜವೇ ; ಹಾಗಿದ್ದಲ್ಲಿ, ಗುರುತಿಸಲಾಗಿರುವ ಭೂಮಿಯ ಸಂಪೂರ್ಣ ವಿವರಗಳನ್ನು ನೀಡುವುದು ;

(ಇ) ರಾಮನಗರ ಪಟ್ಟಣದಲ್ಲಿ ಅಪೆರಲ್ ಪಾರ್ಕ್ ನಿರ್ಮಿಸುವುದರಿಂದ ಪ್ರತಿದಿನ ೫ ಸಾವಿರಕ್ಕೂ ಹೆಚ್ಚು ಹೆಣ್ಣುಮಕ್ಕಳು ಸಿದ್ಧ ಉಡುಪು ಕಾರ್ಖಾನೆಗಳಿಗೆ ಕೆಲಸಕ್ಕೆ ಬೆಂಗಳೂರಿಗೆ ಓಡಾಡುವುದನ್ನು ತಪ್ಪಿಸಿ, ಅವರುಗಳಿಗೆ ಸ್ಥಳೀಯವಾಗಿ ಉದ್ಯೋಗ ದೊರಕಿಸಿಕೊಟ್ಟಂತಾಗುವುದಿಲ್ಲವೇ ;

(ಈ) ಹಾಗಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಾದರೂ ರಾಮನಗರ ಪಟ್ಟಣದಲ್ಲಿ ‘‘ಜವಳಿ ಪಾರ್ಕ್’’ ನಿರ್ಮಿಸುವ ಸಂಬಂಧ ಕ್ರಮ ಕೈಗೊಳ್ಳಲಾಗುವುದೇ ? (ಮಾಹಿತಿ ನೀಡುವುದು)

## ಖಾಸಗಿ ಬಸ್ಸುಗಳಲ್ಲಿ ಸರಕು ಸಾಗಣೆ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) –**

೧೪೯ (೧೧೩೪) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಖಾಸಗಿ ಬಸ್‌ಗಳಲ್ಲಿ ಸರಕು ಸಾಗಣೆ ದಂಧೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸರ್ಕಾರದ ಮಾರ್ಗಸೂಚಿಗಳನ್ನು ಸಾರಿಗೆ ವಾಹನಗಳು ಉಲ್ಲಂಘಿಸುತ್ತಿರುವುದು ನಿಜವೇ ;

(ಇ) ನಿಜವಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ; ಇದುವರೆವಿಗೂ ಎಷ್ಟು ಸಾರಿಗೆ ವಾಹನಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ;

(ಈ) ಖಾಸಗಿ ಸಾರಿಗೆ ವಾಹನಗಳಲ್ಲಿ ಅನುಸರಿಸಬೇಕಾದ ಸುರಕ್ಷತಾ ಮಾರ್ಗಸೂಚಿಗಳನ್ನು ಅನುಸರಿಸಲಾಗುತ್ತಿದೆಯೇ ; ಇಲ್ಲದಿದ್ದಲ್ಲಿ, ಈ ದಿಸೆಯಲ್ಲಿ ಕೈಗೊಂಡ ಕ್ರಮಗಳೇನು ?

# ಧಾರವಾಡದ ಶಿಕ್ಷಣ ಆಯುಕ್ತಾಲಯದ ವ್ಯಾಪ್ತಿಯ ಬೋಧಕೇತರ ನೌಕರರ ಬಡ್ತಿ ಕುರಿತು

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) –**

೧೫೦ (೧೮) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡ ಆಯುಕ್ತಾಲಯದ ಅಧೀನದಲ್ಲಿ ಬರುವ ೭ ಜಿಲ್ಲೆಗಳಲ್ಲಿ ಕೆಲಸ ಮಾಡುತ್ತಿರುವ ಬೋಧಕೇತರ ಸಿಬ್ಬಂದಿಗಳ ಸಂಖ್ಯೆ ಎಷ್ಟು ; ಯಾವ ಯಾವ ಹುದ್ದೆಗಳಲ್ಲಿ ಅವರು ಕೆಲಸ ಮಾಡುತ್ತಿದ್ದಾರೆ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಸುಮಾರು ೬೦೦ ರಿದ ೮೦೦ ಜನರು ಬೋಧಕೇತರ ಸಿಬ್ಬಂದಿಗಳು ಕಳೆದ ನಾಲ್ಕು ವರ್ಷಗಳಿಂದ ಬಡ್ತಿಯಿಂದ ವಂಚಿತರಾಗಿರುವುದು ನಿಜವೇ ; ನಿಜವಿದ್ದಲ್ಲಿ, ಕಾರಣಗಳೇನು ;

(ಇ) ಸದರಿ ವಿಷಯದಲ್ಲಿ ಹೈಕೋರ್ಟ್, ಕೆ.ಎ.ಟಿ. ಮತ್ತು ಲೋಕಾಯುಕ್ತಯರು ೧೫ ದಿನಗಳಲ್ಲಿ ಕ್ರಮ ಕೈಗೊಳ್ಳಲು ನಿರ್ದೇಶನ ನೀಡಿದ್ದಾಗ್ಯೂ, ಇನ್ನೂ ಕ್ರಮ ಕೈಗೊಳ್ಳದಿರಲು ಕಾರಣವೇನು ;

(ಈ) ಸದರಿ ವಿಷಯದಲ್ಲಿ ಸರ್ಕಾರ ತಕ್ಷಣ ಕ್ರಮ ಕೈಗೊಂಡು ಇವರಿಗೆ ನ್ಯಾಯ ಒದಗಿಸುವುದೇ ?

**ಶ್ರೀನಿವಾಸ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು.

ಸರ್ಕಾರಿ ಮುದ್ರಣಾಲಯ, ಸುವರ್ಣಸೌಧ, ಬೆಂಗಳೂರು, ಪಿ7, ಕಾ.ಸೂ. , ಪ್ರತಿಗಳು 1500